**ದಿಃ 22-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1) ಪ್ರತಿವಾದಿ 3 ರವರ ಗಂಡನ ಹೆಸರು ಮಾರುತಿ ಗೌಡರ ಅಲಿಯಾಸ ಪೂಜಾರಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ 3 ರವರ ಗಂಡನ ಹೆಸರು ಬಸಪ್ಪಾ ಗೌಡರ ಅಲಿಯಾಸ ಪೂಜಾರಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 4 ಮತ್ತು 5 ರವರ ತಂದೆಯ ಹೆಸರು ಮಾರುತಿ ಗೌಡರ ಅಲಿಯಾಸ ಪೂಜಾರಿ ಇರುತ್ತದೆ ಎಂದರೆ ಸರಿಯಲ್ಲ. ವಾದಿ ತನ್ನ ವಾದ ಪತ್ರದಲ್ಲಿ ಪ್ರತಿವಾದಿ ನಂಬರ 4 ಮತ್ತು 5 ರವರ ತಂದೆಯ ಹೆಸರು ಬಸಪ್ಪಾ ಗೌಡರ ಅಲಿಯಾಸ ಪೂಜಾರಿ ತಪ್ಪಾಗಿ ತೋರಿಸಿರುತ್ತಾನೆ ಎಂದರೆ ಸರಿಯಲ್ಲ.

2) ನನ್ನ ತಂದೆ ಈಗಲೂ ಆರೋಗ್ಯವಂತರಾಗಿದ್ದು ಹೊಲಮನೆಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ವಿಚಾರಣೆ ಮಾಡಿಕೊಂಡರೆ ಸತ್ಯ ಸಂಗತಿ ಹೊರಬರುತ್ತದೆ ಎನ್ನುವ ಕಾರಣಕ್ಕಾಗಿ ನಾನು ನನ್ನ ತಂದೆಯ ಕಡೆಯಿಂದ ಅಧಿಕಾರ ಪತ್ರ ಪಡೆದುಕೊಂಡು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ .

3) ನಾವು ನಮ್ಮ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿದ್ದೇವೆ. ನನ್ನ ಜಮೀನಿನ ಉತ್ತರ ದಿಕ್ಕಿಗೆ ಮತ್ತು ದಕ್ಷಿಣ ದಿಕ್ಕಿಗೆ ಕಾಲುವೆಗಳು

ಇರುತ್ತವೆ ಎಂದರೆ ಸರಿ. ಸದರಿ ಕಾಲುವೆ ಪಕ್ಕದಲ್ಲಿ ಇರುವ ರಸ್ತೆಯ ಮುಖಾಂತರ ಬೆಳೆಗಳನ್ನು ಸಾಗಿಸಲು ಬರುತ್ತದೆ ಎಂದರೆ ಸರಿಯಲ್ಲ. ದಾರಿಯ ಸಲುವಾಗಿ ಪ್ರತಿವಾದಿಯರಿಗೆ ಹೆಚ್ಚಿಗೆ 10 ಗುಂಟೆ ಜಮೀನು ನೀಡಿರುವ ಸ್ವತ್ತು ಪ್ರತಿವಾದಿ 1 ರವರಿಗೆ ಬಂದಿರುತ್ತದೆ. ದಾರಿಯ ಸಲುವಾಗಿ ಪ್ರತಿವಾದಿಯರಿಗೆ 10 ಗುಂಟೆ ಜಮೀನನ್ನು ಹೆಚ್ಚಿಗೆ ನೀಡಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹಿಂದಿನ ಪಾಟೀ ಸವಾಲಿನ ಖಂಡಿಕೆ 8 ರ ಕೊನೆಯ ಮೂರು ಸಾಲುಗಳಲ್ಲಿ ಪ್ರತಿವಾದಿಯರಿಗೆ 2 ಅಡಿ ಜಮೀನನ್ನು ಬಿಟ್ಟುಕೊಟ್ಟಿರುತ್ತೇವೆ ಎಂದು ಉತ್ತರಿಸಿದ್ದೆ ಎಂದರೆ ಸರಿ. ಸದರಿ 2 ಅಡಿ ಜಮೀನು ನನ್ನ ಜಮೀನಿನ ದಕ್ಷಿಣ ದಿಕ್ಕಿನ ಜಮೀನು ಬಿಟ್ಟುಕೊಟ್ಟಿರುತ್ತೇನೆ ಅದರ ಉದ್ದ ಎಷ್ಟು ಇರುತ್ತದೆ ಎಂಬುವುದು ನನಗೆ ಗೊತ್ತಾಗುವುದಿಲ್ಲ.

4) ರಿ ಸ ನಂಬರ 106 ಮತ್ತು 107 ರ ಜಮೀನುಗಳ ಮಧ್ಯದಲ್ಲಿ ವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ಎ ಬಿ ಸಿ ಡಿ ದಾವಾ ರಸ್ತೆ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಎ ಬಿ ಸಿ ಡಿ ದಾವಾ ರಸ್ತೆ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ನಮ್ಮೂರಿನ ಹಿರಿಯರು ಅನೇಕ ಸಲ ನ್ಯಾಯ ಪಂಚಾಯತಿ ಮಾಡಿ ನನಗೆ ತಿಳಿಸಿದ್ದರೂ ಸಹ ನಾನು ಹಿರಿಯರ ಮಾತನ್ನು ಧಿಕ್ಕರಿಸಿ ಪ್ರತಿವಾದಿಯರಿಗೆ ಕಾಡಬೇಕು ಎನ್ನುವ ಉದ್ದೇಶದಿಂದ ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದೆ ಇದ್ದರೂ ಸಹ

ಅವರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಇದೊಂದು ಕಿರುಕುಳಕಾರಿಯಾದ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ